ಸೂಪರ್‌ಸೀಡ್ ಮಾಡಿದ ಮೇಲೆ, ಅಡ್‌ಮಿನಿಸ್ಟ್ರೇಟರ್ ಮಾತ್ರ ಇರಬಹುದು. ಉಳಿದ ಕಡೆ ೮೫ ಪರ್ಸೆಂಟ್ ಜನ ಇವತ್ತು ಅಧ್ಯಕ್ಷರಾಗಿದ್ದಾರೆ. ಆದರೆ ಅವರು ಸಹಕಾರ ಇಲ್ಲದೆ ಅಥವಾ ಅಲ್ಲಿರ ತಕ್ಕಂತಹವರು ಯಾರು ಸಾಲವನ್ನು ಪಡೆದುಕೊಂಡಿದ್ದಾರೋ ಅವರ ಸಹಕಾರ ಮತ್ತು ಸಹಾಯ ಇಲ್ಲದೆ ವಸೂಲಾತಿ ಆಗುವುದಿಲ್ಲ. ಅದಕ್ಕಾಗಿ ಅಪೀಲ್ ಮಾಡಿಕೊಳ್ಳುತ್ತೇನೆ, ಮಾನ್ಯ ಸದಸ್ಯಣಿಯರಾಗಲಿ ಅಥವಾ ಸದಸ್ಯರಾಗಲೀ ಎಲ್ಲರೂ ಕೂಡ ಈ ವಸೂಲಾತಿಗೆ ಸಹಕಾರ ಕೊಟ್ಟರೆ ಖಂಡಿತ ಹೆಚ್ಚಿನ ಪ್ರಮಾಣದಲ್ಲಿ ನಾವು ಸಾಲ ವಸೂಲಾತಿ ಮಾಡಿ ಅದೇ ರೀತಿಯಾಗಿ ಡಿಸ್ಟ್ರಿಬ್ಯೂಷನ್ ಮಾಡುವುದಕ್ಕೆ ನಮಗೆ ಅವಕಾಶವಾಗುತ್ತದೆ ಎನ್ನುತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ. ಎರಡನೆಯದಾಗಿ ಶ್ರೀಮಂತ ಜಿಲ್ಲೆಗಳಲ್ಲಿಯೇ ಇವತ್ತು ನಾವು ತೊಂದರೆಗಿಡಾಗಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಹಾಸನ ಜಿಲ್ಲೆ, ಮಂಡ್ಯ ಜಿಲ್ಲೆ, ಶಿವಮೊಗ್ಗ ಜಿಲ್ಲೆ ಅನೇಕ ಕಡೆ ನಮ್ಮ ವಸೂಲಾತಿ ಪ್ರಮಾಣ ಕಡಿಮೆ ಇರುವುದರಿಂದ ನಮ್ಮ ಡಿಸಿಸಿ ಬ್ಯಾಂಕ್‌ಗಳು ಇವತ್ತು ಡಿಫಂಕ್ಟ್‌ನಲ್ಲಿವೆ. ಆದರೆ ಇವತ್ತು ನಾವು ಚಾರುಕುಗೊಳಿಸಿದ್ದೇವೆ. ಅನೇಕ ನಮ್ಮ ಕೃಷಿಕರು ಮುಂದೆ ಬಂದು ಇವತ್ತು ನಾವು ಸಾಲ ಮರುಪಾವತಿ ಮಾಡಿದರೆ ನಮಗೆ ಒಳ್ಳೆಯದು ಆಗುತ್ತದೆ ಎನ್ನುವ ಭಾವನೆ ತಿಳಿದುಕೊಂಡಿದ್ದಾರೆ. ಅದಕ್ಕೆ ಇವತ್ತು ಬಹಳ ಜನ ಸಾಲ ಕೊಡುತ್ತಿದ್ದಾರೆ. ನಾನು ಬಹಳ ಹೆಮ್ಮೆಯಿಂದ ಹೇಳುತ್ತೇನೆ, ಹೋದಸಲ ೫೦ ಕೋಟಿ ರೂಪಾಯಿ ಕೊಟ್ಟರೆ ಈ ವರ್ಷ ಎರಡು ನೂರು ಕೋಟಿ ರೂಪಾಯಿ ಸಾಲವನ್ನು ಕೊಟ್ಟಿದ್ದೇವೆ. ನಮ್ಮ ಮುಂದೆ ಬರತಕ್ಕ ವರ್ಷದಲ್ಲಿ ಸುಮಾರು ಮೂರು ನೂರು ಕೋಟಿ ರೂಪಾಯಿ ಸಾಲವನ್ನು ಡಿಸ್ಟ್ರಿಬ್ಯೂಟ್ ಮಾಡತಕ್ಕ ಗುರಿಯನ್ನು ಇಟ್ಟುಕೊಂಡಿದ್ದೇವೆ. ಈ ಮಹತ್ತರ ವಾದಂಥ ಸಾಧನೆಯನ್ನು ನಾವು ಮಾಡಿದ್ದೇವೆ ಎಂಬುದನ್ನು ಸ್ಪಷ್ಟಪಡಿಸುತ್ತೇನೆ.

ಶ್ರೀಮತಿ ಸುಮಾ ವಸಂತ್. —ಚುನಾಯಿತ ಪ್ರತಿನಿಧಿಗಳು ಸಹಕಾರಿ ಸಂಘಗಳ ನಿಯಮಗಳನ್ನು ಪಾಲಿಸದಿದ್ದರೆ, ಅಂತಹ ಸಹಕಾರ ಸಂಘಗಳನ್ನು ರದ್ದು ಮಾಡಿ ಆಡಳಿತಾಧಿಕಾರಿಗಳನ್ನು ನೇಮಿಸುತ್ತೀರಾ? ಬಡವರು ಸಾಲ ತೆಗೆದುಕೊಂಡಿದ್ದರೆ, ಅವರ ಮನೆಗೆ ನುಗ್ಗಿ ತಟ್ಟೆ, ಚೊಂಬುಗಳನ್ನು ತೆಗೆದುಕೊಂಡು ಹೋಗುತ್ತೀರಿ, ದೊಡ್ಡವರು ಸಾಲ ತೆಗೆದುಕೊಂಡಿದ್ದರೆ ಅವರಿಂದ ವಸೂಲಾತಿಯನ್ನು ಸರಿಯಾಗಿ ಮಾಡಲು ಕ್ರಮಕೈಗೊಳ್ಳುತ್ತೀರಾ ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ. —ಶ್ರೀಮಂತರೇ ಇರಲಿ, ಯಾರೇ ಇರಲಿ, ಯಾರು ಸಹಕಾರ ಸಂಘಗಳಲ್ಲಿ ಹಣವನ್ನು ತೆಗೆದುಕೊಂಡಿದ್ದರೋ ಅವರಿಂದ ವಸೂಲಾತಿಯನ್ನು ಮಾಡಿಯೇ ಮಾಡುತ್ತೇವೆ. ಆದರೂ ಸಹ ನಾವು ಆದೇಶ ಕೊಟ್ಟಿದ್ದೇವೆ. ಕಡುಬಡವರು ಇದ್ದರೆ ಅಂತಹ ಕೇಸ್‌ಗಳನ್ನು ನೋಡಿ ಕೊಳ್ಳುವಂತೆ ನಾವು ಹೇಳಿದ್ದೇವೆ. ದೊಡ್ಡವರ ಸಾಲಗಳನ್ನು ವಸೂಲಾತಿ ಮಾಡುತ್ತಿದ್ದೇವೆ. ಅದ್ದರಿಂದಲೇ ಇವತ್ತಿನ ದಿವಸ ನಮಗೆ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ವಸೂಲಾತಿ ಮಾಡಲು ಸಾಧ್ಯವಾಗುತ್ತಿದೆ. ಎಲ್ಲೆಲ್ಲಿ ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೋ ಅಂತಹ ಕಡೆಗಳಲ್ಲಿ ಖಂಡಿತವಾಗಿ ಅವುಗಳನ್ನು ಸೂಪರ್‌ಸೀಡ್ ಮಾಡಿ ಅಧಿಕಾರಿಗಳನ್ನು ಹಾಕುತ್ತೇವೆ. ಆದರೆ ಬರೀ ಅಧಿಕಾರಿಗಳನ್ನು ಹಾಕಿದರೆ ಏನೂ ಸುಧಾರಣೆ ಆಗುವುದಿಲ್ಲ. ಎಲ್ಲಿಯವರೆಗೆ ಇಂತಹ ಸಂಘಗಳಲ್ಲಿ ಇರತಕ್ಕ ಸದಸ್ಯರುಗಳು ಮತ್ತು ಡೈರೆಕ್ಟರುಗಳು ಪ್ರಾಮಾಣಿಕವಾಗಿ ಕೆಲಸ ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ಸಂಘಗಳು ಅಭಿವೃದ್ಧಿಯಾಗುವುದಿಲ್ಲ ಎನ್ನತಕ್ಕ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ.

ಗ್ರಾಮ ಪಂಚಾಯಿತಿಗಳಿಗೆ ನೀಡಲಾದ ಅನುದಾನದ ಪ್ರಮಾಣ

೩೧೦ (೫೦೪) ಶ್ರೀ ಕೆ. ವಿಜಯಕುಮಾರ್ ಶೆಟ್ಟಿ (ಸೂರತ್ಕಲ್).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಾರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದ ನೂತನ ''ಗ್ರಾಮ ಪಂಚಾಯ್ತಿ'' ಗಳಿಗೆ ಸರ್ಕಾರ ನೀಡಲಾದ ಅನುದಾನ ಪ್ರಮಾಣವೆಷ್ಟು ?

ಆ) ಗ್ರಾಮ ಪಂಚಾಯ್ತಿಗಳ ಅನುದಾನದಲ್ಲಿ "ವ್ಯಾಪಕ ಪಣ" ಸಿಬ್ಬಂದಿ ವೇತನಕ್ಕೆ ಖರ್ಚಾಗುವುದು ನಿಜವೇ ?

ಇ) ಮೇಲ್ಕಂಡ ಪಂಚಾಯ್ತಿಗಳನ್ನು ಆರ್ಥಿಕವಾಗಿ ಸಶಕ್ತಗೊಳಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು). -

ಅ) ಸರ್ಕಾರವು ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ವಾರ್ಷಿಕವಾಗಿ ಒಂದು ಲಕ್ಷ ರೂಪಾಯಿಗಳ ಅನುದಾನವನ್ನು ನೀಡುವುದು.

ಆ) ಈ ಅನುದಾನವನ್ನು ವಿದ್ಯುತ್ ಚಾರ್ಜುಗಳನ್ನು ಭರಿಸಲು ನೀರು ಸರಬರಾಜು ಯೋಜನೆಗಳು ನೈರ್ಮಲ್ಯ ವ್ಯವಸ್ಥೆ ನಿರ್ವಹಣೆಗೆ ಬಳಸಲಾಗುವುದು. ಅನುದಾನದ ಯಾವುದೇ ಭಾಗವನ್ನು ಮೇಲಿನ ಉದ್ದೇಶಗಳಿಗೆ ಸಂಬಂಧಿಸಿರದ ಸಿಬ್ಬಂದಿ ವೆಚ್ಚಗಳಿಗೆ ಖರ್ಚು ಮಾಡತಕ್ಕದ್ದಲ್ಲ.

ಇ) ಸರ್ಕಾರವು ಗ್ರಾಮ ಪಂಚಾಯಿತಿಗಳ ಹಣಕಾಸು ಪರಿಸ್ಥಿತಿಗಳನ್ನು ಪರಾಮರ್ಶಿಸಲು ಮತ್ತು ಅವುಗಳ ಹಣಕಾಸು ಪರಿಸ್ಥಿತಿಯನ್ನು ಸುಧಾರಿಸಲು ಅವಶ್ಯವಾದ ಕ್ರಮಗಳನ್ನು ಶಿಫಾರಸ್ಸು ಮಾಡಲು ಹಣಕಾಸು ಆಯೋಗವೊಂದನ್ನು ಇಷ್ಟರಲ್ಲಿಯೇ ರಚಿಸಲು ಉದ್ದೇಶಿಸಿದೆ.

ಶ್ರೀ ವಿಜಯಶಂಕರ್ ಶೆಟ್ಟಿ.—ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಒಂದು ಲಕ್ಷ ರೂ. ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಇದು ಬರೀ ಕೆ.ಇ.ಬಿ. ಮತ್ತು ನೀರಿನ ಬಿಲ್ಲುಗಳಿಗೆ ಮತ್ತು ಅಲ್ಲಿನ ನೌಕರರುಗಳ ಸಂಬಳ ಕೊಡಲು ಸಾಕಾಗುವುದಿಲ್ಲ. ಆದುದರಿಂದ ಕನಿಷ್ಟ ಪ್ರತಿ ಮಂಡಲಕ್ಕೆ ಐದು ಲಕ್ಷ ರೂ.ಗಳನ್ನು ನೀವು ಕೊಡಬೇಕು. ಏತಕ್ಕೆಂದರೆ ನೀವು ಪ್ರತಿಸಲ ಗ್ರಾಮಾಭಿವೃದ್ಧಿ ಬಗ್ಗೆ ಹೇಳುತ್ತೀರಿ. ಗ್ರಾಮಗಳಿಗೆ ಜನ ಹೋಗಬೇಕಾದರೆ ಹಾಗೂ ದೊಡ್ಡ ದೊಡ್ಡ ಕೈಗಾರಿಕೆಗಳು ಬರಬೇಕಾದರೆ ಅಲ್ಲಿಗೆ ಬೇಸಿಕ್ ಫೆಸಿಲಿಟೀಸ್‌ಗಳನ್ನು ಕೊಡಬೇಕು. ಅದನ್ನು ಆಗತಕ್ಕಂಥ ವ್ಯವಸ್ಥೆ ಆದರೆ ಮಾತ್ರ ಜನ ಅಲ್ಲಿಗೆ ಹೋಗಲು ಇಷ್ಟಪಡುತ್ತಾರೆ. ಆದ್ದರಿಂದ ಈ ವರ್ಷ ಕನಿಷ್ಟ ಪಕ್ಷ ಐದು ಲಕ್ಷ ರೂ.ಗಳನ್ನು ಪ್ರತಿ ಗ್ರಾಮ ಪಂಚಾಯಿತಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಇದರ ಜೊತೆಗೆ ಬೋರ್‌ವೆಲ್‌ಗಳನ್ನು ಮತ್ತು ಇತರ ಭಾಗ್ಯಜ್ಯೋತಿ ಯೋಜನೆಯಲ್ಲಿ ಕರೆಂಟನ್ನು ಪುಕ್ಕಟೆಯಾಗಿ ಕೊಡುವ ವ್ಯವಸ್ಥೆ ಮಾಡಬೇಕು.

ಶ್ರೀ ಎಂ.ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ನಮ್ಮ ಉದ್ದೇಶ ಕೂಡ ಹಾಗೆಯೇ ಇದೆ. ಈಗ ಈ ಹೊಸ ಕಾನೂನು ಬರುವುದಕ್ಕೆ ಮುಂಚೆ ಮಂಡಲ ಪಂಚಾಯಿತಿ ಆದಾಯ ಏನಿತ್ತು, ಅದರಲ್ಲಿ ಶೇ. ೪೦ರಷ್ಟಕ್ಕೂ ಹೆಚ್ಚು ಎಷ್ಟಾಬ್ಲಿಷ್‌ಮೆಂಟ್‌ಗೆ ಖರ್ಚು ಮಾಡಬಾರದು ಎಂಬ ನಿಯಮ ಇದೆ. ಹಾಗೂ ಹೊಸದಾಗಿ ಒಂದು ಲಕ್ಷ ರೂಪಾಯಿ ಕೊಡುತ್ತೇವೆ. ಅಂದರೆ ೫೬೪೦ ಪಂಚಾಯಿತಿಗಳಿಗೆ ೫೬ ಕೋಟಿ ರೂಪಾಯಿಗಳನ್ನು ಈ ಬಡ್ಜೆಟ್‌ನಲ್ಲಿ ಸೇರಿಸಿದ್ದೇವೆ. ನಮ್ಮ ಆಕ್ಟ್‌ನಲ್ಲೂ ಕೂಡ ಇದೆ. ಆದರಲ್ಲಿಯೂ ಕೂಡ ನೀವು ಎಷ್ಟಾಬ್ಲಿಷ್‌ಮೆಂಟ್‌ಗೆ ಖರ್ಚು ಮಾಡಬಾರದು ಎನ್ನತಕ್ಕ ಮಾತನ್ನು ಸ್ಪಷ್ಟಪಡಿಸಿದ್ದೇವೆ. ಒಂದು ಲಕ್ಷ ರೂ. ಏನು ಕೊಡುತ್ತೇವೆ, ಅದನ್ನು ಸ್ಯಾನಿಟೇಷನ್ ವಿದ್ಯುಚ್ಛಕ್ತಿ ಮತ್ತು ಕುಡಿಯುವ ನೀರಿನ ವ್ಯವಸ್ಥೆಗಾಗಿ ಹಾಗೂ ಅದಕ್ಕೆ ಸಂಬಂಧಪಟ್ಟ ಹಾಗೆ ಮಾತ್ರ ಖರ್ಚು ಮಾಡಬೇಕೆಂದು ಹೇಳಿದ್ದೇವೆ. ಬೇರೆ ಬೇರೆ ಬಾಬ್ತುಗಳಿಗೆ ಈ ಹಣವನ್ನು ಖರ್ಚು ಮಾಡಬಾರದು ಎಂದು ಹೇಳಿದ್ದೇವೆ. ಈ ಒಂದು ಲಕ್ಷ ರೂ.ಗಳೂ ಅಲ್ಲದೆ ಜವಾಹರ್ ರೋಜಗಾರ್ ಯೋಜನೆಯಿಂದ ಮೂರು ನಾಲ್ಕು ಲಕ್ಷ ರೂ.ಗಳು ಒಂದೊಂದು ಪಂಚಾಯಿತಿಗೆ ಬರುತ್ತದೆ. ಇದು ೫೬ ಕೋಟಿ ರೂ. ಆಗುತ್ತದೆ. ಇದರ ಜೊತೆಗೆ ಎರಡು ನೂರು ಕೋಟಿ ರೂ.ಗಳು ಜವಾಹರ್ ರೋಜಗಾರ್ ಯೋಜನೆಯಿಂದ ಬರುತ್ತದೆ, ಒಂದೊಂದು ಪಂಚಾಯಿತಿಗೆ ೪-೫ ಲಕ್ಷ ರೂ.ಗಳು ಪ್ರತಿ ವರ್ಷ ಖಂಡಿತವಾಗಿ ಸಿಗುತ್ತದೆ. ಅದನ್ನು ಸರಿಯಾಗಿ ಖರ್ಚು ಮಾಡಬೇಕು ಎಂದು ನಾವು ಸೂಚಿಸಿದ್ದೇವೆ. ಇದರ ಬಗ್ಗೆ ತಾವೆಲ್ಲರೂ ಕೂಡ ಒಂದು ಗೈಡೆನ್ಸ್, ಸಲಹೆ ಹಾಗೂ ಸಹಕಾರವನ್ನು ಕೊಡಬೇಕು.

ಶ್ರೀ ವಿಜಯಶಂಕರ್ ಶೆಟ್ಟಿ.—ಸಂಪನ್ಮೂಲ ಬಹಳ ಕಡಿಮೆ ಇದೆ. ದಯವಿಟ್ಟು ಒಂದೊಂದ ಲಕ್ಷ ರೂ. ಕೊಡುವಂಥದ್ದನ್ನು ಐದು ಲಕ್ಷ ರೂ.ಗಳನ್ನಾಗಿ ಮಾಡಿ. ಬೆಂಗಳೂರು ವೆಗಾಸಿಟಿಗೆಂದು ಹೇಳಿ ೭೫೦ ಕೋಟಿ ರೂ.ಗಳನ್ನು ಈ ಬಡ್ಜೆಟ್‌ನಲ್ಲಿ ಇಟ್ಟಿದ್ದೀರಿ. ಗ್ರಾಮ ಪಂಚಾಯಿತಿಯ ಒಂದೊಂದು ಮಂಡಲಕ್ಕೆ ಐದು ಲಕ್ಷ ರೂ. ಕೊಟ್ಟರೆ ಅದರಿಂದ ಖಂಡಿತವಾಗಿ ಬಹಳ ಅನುಕೂಲವಾಗುತ್ತದೆ.

ಶ್ರೀ ಎಂ.ವೈ. ಘೋರ್ಪಡೆ.—ನಮ್ಮ ಗ್ರಾಂಟಿನ ಒಂದು ಲಕ್ಷ ರೂ. ಅಲ್ಲಿದೆ. ನಾಲ್ಕು-ಐದು ಲಕ್ಷ ರೂ.ಗಳು ಅವರಿಗೆ ಸಿಗುತ್ತವೆ. ಡೈರೆಕ್ಟಾಗಿ ಜವಾಹರ್ ರೋಜಗಾರ್ ಯೋಜನೆಯಿಂದ ಅವರಿಗೆ ಹಣ ಬರುತ್ತದೆ. ಇದೂ ಅಲ್ಲದೆ ಫೈನಾನ್ಸ್ ಕಮೀಷನ್‌ನನ್ನು ನಾವು ನೇಮಕ ಮಾಡಬೇಕೆಂದು ನಮ್ಮ ಕಾನೂನಿನಲ್ಲಿ ಸೇರಿಸಿದ್ದೇವೆ. ಈ ಆಕ್ಟ್ ಆದನಂತರ ಒಂದು ವರ್ಷದ ಅವಧಿಯಲ್ಲಿ ಹಣಕಾಸು ದೃಷ್ಟಿಯಿಂದ ಯಾವ ರೀತಿ ಇವುಗಳನ್ನು ಬಲಪಡಿಸಲು ಸಾಧ್ಯ ಎಂಬುದರ ಬಗ್ಗೆ ಸ್ಪಷ್ಟವಾದ

ಫಾರಸ್ಸುಗಳನ್ನು ಮಾಡಲು ಒಂದು ಫೈನಾನ್ಸ್ ಕಮೀಷನನ್ನು ನಾವು ನೇಮಕ ಮಾಡಲಿದ್ದೇವೆ. ಮೇ ೧೦ರೊಳಗೆ ಅದನ್ನು ನಾವು ನೇಮಕ ಮಾಡಬೇಕಾಗುತ್ತದೆ. ನಮ್ಮ ಕಾನೂನು ಏನಿದೆ ಕರ್ನಾಟಕ ಪಂಚಾಯಿತಿ ಆಕ್ಟ್ ೧೯೯೩, ಅದು ಮೇ ೧೦ನೇ ತಾರೀಖು ೧೯೯೩ರಂದು ಬಂತು. ಆದ್ದರಿಂದ ನಾವು ೯ಳನೇ ಮೇ ೧೦ಕ್ಕೆ ಮುಂಚಿತವಾಗಿ ಈ ಫೈನಾನ್ಸ್ ಕಮೀಷನನ್ನು ಕೂಡ ನೇಮಕ ಮಾಡುತ್ತೇವೆ. ಈ ಎಲ್ಲಾ ವಿಷಯಗಳನ್ನು ಸಮಗ್ರವಾಗಿ ಅಭ್ಯಾಸ ಮಾಡಿದರೆ ಅವುಗಳ ಹಣಕಾಸಿನ ಪರಿಸ್ಥಿತಿಯನ್ನು ಬಲಪಡಿಸಲು ಸಹಾಯವಾಗುತ್ತದೆ.

ಶ್ರೀ ವಿಜಯಕುಮಾರ್ ಶೆಟ್ಟಿ.—ನೀರಿನ ಸರಬರಾಜು ವ್ಯವಸ್ಥೆ ಬಹಳ ಕಡಿಮೆಯಾಗಿದೆ. ಆದ್ದರಿಂದ ಪ್ರತಿಯೊಂದು ಗ್ರಾಮ ಪಂಚಾಯಿತಿಗೂ ೫–೫ ಬೋರ್‌ವೆಲ್‌ಗಳನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ.—ಜನಸಂಖ್ಯೆಯ ಆಧಾರದಮೇಲೆ ಅನುದಾನವನ್ನು ನೀಡುವ ವ್ಯವಸ್ಥೆ ಮಾಡಿದರೆ ಬಹಳ ಚೆನ್ನಾಗಿರುತ್ತದೆ. ದೊಡ್ಡ ಪಂಚಾಯಿತಿಗಳಿಗೂ ೧ ಲಕ್ಷ ರೂ. ಕಡಿಮೆ ಜನಸಂಖ್ಯೆ ಇರತಕ್ಕ ಪಂಚಾಯಿತಿಗಳಿಗೂ ೧ ಲಕ್ಷ ರೂ. ಎಂದು ಮಾಡಿರುವುದರಿಂದ ದೊಡ್ಡ ಪಂಚಾಯಿತಿಗಳಲ್ಲಿ ದೈನಂದಿನ ಕಾರ್ಯನಿರ್ವಹಣೆಗೆ ತೊಂದರೆಯಾಗುತ್ತಿದೆ. ಇದನ್ನು ಪುನರ್ ವಿಮರ್ಶೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಂಡಲ ಪಂಚಾಯಿತಿಯ ಸ್ಯಾಫ್ಟಿಂಗ್ ಪ್ಯಾಟರ್ನ್‌ನಲ್ಲಿ ಸ್ವಲ್ಪ ಮಟ್ಟಿಗೆ ತೊಂದರೆ ಇದೆ. ಅತಿ ಅಮೂಲ್ಯವಾದ ಸೇವೆಯನ್ನು ಸಲ್ಲಿಸುವ ಪೌರಕಾರ್ಮಿಕರ ಹುದ್ದೆಗಳು ಬಿಟ್ಟುಹೋಗಿವೆ. ಸ್ಯಾಫ್ಟಿಂಗ್ ಪ್ಯಾಟರ್ನ್‌ನಲ್ಲಿ ಇದನ್ನೂ ಸೇರಿಸ ಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ.—ತಮಗೆ ಗೊತ್ತಿರುವಂತೆ ಹಳೇ ಮಂಡಲ ಪಂಚಾಯತಿಗಳಲ್ಲಿ ಸುಮಾರು ೧೭ ಸಾವಿರ ಜನರನ್ನು ಬೇರೆ ಬೇರೆ ಕೆಲಸಗಳಿಗಾಗಿ ಅಕ್ರಮವಾಗಿ ನೇಮಕಾತಿ ಮಾಡಿ ಕೊಂಡಿದ್ದರು. ಅದನ್ನೆಲ್ಲಾ ನಾವು ಈಗ ಸಕ್ರಮಗೊಳಿಸಿದ್ದೇವೆ. ಅಂದರೆ ಯಾವ ಯಾವ ಪಂಚಾಯಿತಿಗಳಲ್ಲಿ ಎಷ್ಟೆಷ್ಟು ಸಿಬ್ಬಂದಿ ವರ್ಗ ಇರಬೇಕು, ಯಾವ ಯಾವ ವರ್ಗಕ್ಕೆ ಸೇರಿದವರು ಎಷ್ಟೆಷ್ಟು ಇರಬೇಕು, ಅವರ ವಿದ್ಯಾರ್ಹತೆ ಮತ್ತು ಪರಿಷ್ಕೃತ ಸಂಬಳ ಸಾರಿಗೆಗಳು ಎಷ್ಟೆಷ್ಟು ಇರಬೇಕೆಂಬುದನ್ನು ನಾವು ನಿಗದಿ ಮಾಡಿದ್ದೇವೆ. ಇದರ ಬಗ್ಗೆ ಒಂದು ಆರ್ಡರನ್ನು ತರುವುದಕ್ಕೆ ಪ್ರಯತ್ನ ನಡೆಸುತ್ತಿದ್ದೇವೆ. ಪಂಚಾಯಿತಿಗೆ ಬರತಕ್ಕ ಆದಾಯವೆಲ್ಲಾ ಕೇವಲ ಸಿಬ್ಬಂದಿ ವರ್ಗಕ್ಕೇ ಖರ್ಚಾಗಬಾರದು, ಹಾಗೆ ಖರ್ಚಾದರೆ ಏನೂ ಪ್ರಯೋಜನವಾಗುವುದಿಲ್ಲವೆಂದು ನಮ್ಮ ಉದ್ದೇಶವಾಗಿದೆ. ಆದ್ದರಿಂದ, ಹಿಂದೆ ಏನು ತಪ್ಪಾಗಿತ್ತು, ಅದನ್ನು ಸರಿಪಡಿಸುವುದಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಯಾವುದೇ ಅನುಮಾನವೂ ಬೇಡವೆಂದು ಹೇಳಬಯಸುತ್ತೇನೆ.

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆ

೩೧೨(೭೫೫) ಶ್ರೀ ಬಸವಂತರೆಡ್ಡಿ ದೋತಕಪಲ್ಲಿ (ಸೇಡಂ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಖಿಲ್ಲೆಮ್, ಅಳ್ಳಳ್ಳಿ, ಕಿಷ್ಟಾಪುರ, ತೊಲಮಾಮಿಡಿ, ಹೊಸಹಳ್ಳಿ, ನೀಲಹಳ್ಳಿ ಗ್ರಾಮಗಳಿಗೆ ಪ್ರತಿವರ್ಷ ಕುಡಿಯುವ ನೀರಿನ ತೊಂದರೆ ಉಂಟಾಗುವುದು ನಿಜವೇ?

(ಆ) ಆ ಗ್ರಾಮಗಳಲ್ಲಿ ಕುಡಿಯುವ ನೀರಿನ ಯೋಜನೆಗಳು ಮಂಜೂರಾಗಿ ೩–೪ ವರ್ಷ ಗಳಾದರೂ ಸಹ ನೀರು ಸರಬರಾಜು ಇಲ್ಲದೇ ಇರುವುದರಿಂದ ನಾಗರೀಕರಿಗೆ ತೊಂದರೆಯಾಗಿ ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳಾಗಿಯೇ ಉಳಿದಿರುವುದು ನಿಜವೇ?

(ಇ) ಈ ಮಾರ್ಚ್ ಒಳಗಾಗಿ ಈ ಗ್ರಾಮಗಳ ನಾಗರೀಕರಿಗೆ ಯಾವುದೇ ನೆಪವಿಲ್ಲದೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬಹುದೇ?